**ಒ ಎಸ್ ನಂ. 73/2019 ಪಿ ಡಬ್ಲೂ-2**

**<u>ದಿನಾಂಕಃ 14.02.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**

**<u>ಪಾಟೀ ಸವಾಲುಃ- ಶ್ರೀ ಎನ್ ಎಸ್ ಎಸ್ ವಕೀಲರಿಂದಃ</u>**

ನಾನು ಪಿ ಯು ಸಿ ವರೆಗೆ ಓದಿದ್ದೇನೆ. ವಾದಿ ಸಣ್ಣಮ್ಮನ ಮನೆ ನಮ್ಮ ಮನೆಯಿಂದ ಮುಕ್ಕಾಲು ಕಿ ಮೀಟರ್ ದೂರ ಇದೆ. ನಾವು ಒಂದೇ ಊರಿನವರು ಎಂದರೆ ಸರಿ. 1 ನೇ ವಾದಿ ಮಗ PW1/ಪುರುಷೋತ್ತಮ ಸಂಬಂಧಿ ಏನೂ ಅಲ್ಲಾ ಒಂದೇ ಊರಿನವರು ಎನ್ನುತ್ತಾರೆ. ಪುರುಷೋತ್ತಮನ ಹೆಂಡತಿ ಮತ್ತು ನೀವು ಗ್ರಾಮ ಪಂಚಾಯಿತಿಯ ಸದಸ್ಯರಾಗಿದ್ದೀರಿ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಈಗಲೂ ನೀವು ಸದಸ್ಯರಾಗಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಗ್ರಾಮದ ಎಲ್ಲಾ ವಿದ್ಯಾಮಾನಗಳು ನಿಮಗೆ ಗೊತ್ತಿರುತ್ತವೆ ಎಂದರೆ ಸಾಕ್ಷಿ ಎಲ್ಲವೂ ಗೊತ್ತಿರುವುದಿಲ್ಲ ಕೆಲವು ಗೊತ್ತಿರುತ್ತದೆ ಎನ್ನುತ್ತಾರೆ. ನಿಮ್ಮ ಊರು 300 ಮನೆ ಗ್ರಾಮ ಎಂದರೆ ಸರಿ. ಪುರುಷೋತ್ತಮ 8 ನೇ ತರಗತಿ ವರೆಗೆ ಓದಿರಬಹುದು. ದಾವಾ ಸ್ವತ್ತಿನ ಸಂಬಂಧ ಹಿಂದೆ ನಡೆದಿರುವ ವ್ಯಾಜ್ಯಗಳ ಬಗ್ಗೆ ನನಗೆ ಗೊತ್ತಿಲ್ಲ. ನೀವು ಜಿ ಸಿ ಬೋರೇಗೌಡರ ಮಗ ಎಂದರೆ ಸರಿ. ಅವರ ತಂದೆಯ ಹೆಸರು ಹುಚ್ಚೇಗೌಡ ಎಂದರೆ ಸರಿ. ಹುಚ್ಚೇಗೌಡನಿಗೆ ನಮ್ಮ ತಂದೆ ಸೇರಿಕೊಂಡು ಒಟ್ಟು 5 ಜನ ಮಕ್ಕಳು. ಆ ಕಾಲಕ್ಕೆ ನಿಮ್ಮ ಊರಿನಲ್ಲಿ ಹೆಚ್ಚು ವಿದ್ಯಾವಂತರು ನಿಮ್ಮ ತಂದೆ ಜಿ ಸಿ ಬೋರೇಗೌಡರು ಎಂದರೆ ಸಾಕ್ಷಿ ಹಾಗೇನೂ ಇಲ್ಲ 10 ನೇ ತರಗತಿ ವರೆಗೆ ಓದಿದ್ದರು ಎನ್ನುತ್ತಾರೆ. ನಿಮ್ಮ ತಂದೆ ಜಿ ಸಿ ಬೊರಾೇಗೌಡರು ಚನ್ನರಾಯಪಟ್ಟಣ ದ ಸಬ್ ರಿಜಿಸ್ಟರ್ ಕಚೇರಿಯಲ್ಲಿ ಪತ್ರ ಬರಹಗಾರರಾಗಿ ಅನೇಕ ಪತ್ರಗಳನ್ನ ಬರೆದು ನೊಂದಾಯಿಸಿದ್ದಾರೆ ಎಂದರೆ ಸರಿಯಲ್ಲ. ನಿಮ್ಮ ತಂದೆಯ ಜೊತೆ ಹುಟ್ಟಿದ ಇತರ ಸಹೋದರರು ಅಂತಹ

ವಿದ್ಯಾವಂತರಲ್ಲ ಎಂದರೆ ಸರಿಯಲ್ಲ. ನನ್ನ ತಂದೆಯ ಅಣ್ಣ ಭೈರೇಗೌಡ 1999 ರಲ್ಲಿ ತೀರಿಕೊಂಡಿದ್ದಾರೆ. ಅವರು ತೀರಿಕೊಳ್ಳುವವರೆಗೂ ಆರೋಗ್ಯವಾಗಿ ಇದ್ದರು ಎಂದರೆ ಸರಿ. ಅವರು ತೀರಿಕೊಂಡ 3-4 ವರ್ಷ ನಿಮ್ಮ ದೊಡ್ಡಮ್ಮ ತೀರಿಕೊಂಡರು ಎಂದರೆ ಸರಿ. ನಿಮ್ಮ ತಂದೆಗೆ ಕುಟುಂಬದ ವ್ಯವಹಾರಗಳು ಗೊತ್ತಿತ್ತಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಹುಚ್ಚೇಗೌಡರ ಮಗ ಜಿ ಸಿ ಬೊರೇಗೌಡ ಎಂದರೆ ನಿಮ್ಮ ತಂದೆ ಒಬ್ಬರೇ ಅಲ್ಲವಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಿಪಿ-1 ರ ಕ್ರಯ ಪತ್ರದಲ್ಲಿ ಮೊದಲನೇ ಸಾಕ್ಷಿ ಜಿ ಸಿ ಬೊರೇಗೌಡ ಎಂದು ಬರೆದಿರುವುದು ನಿಮ್ಮ ತಂದೆಯ ಹೆಸರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಪುರುಷೋತ್ತಮ ವ್ಯವಸಾಯದ ಜೊತೆಗೆ ಪಂಚಾಯಿತಿ ವ್ಯಾಪ್ತಿಯ ಕಾಮಗಾರಿಗಳ ಗುತ್ತಿಗೆ ಕೆಲಸ ಮಾಡುತ್ತಾರೆ. ನಿಪಿ-1 ರ ಕ್ರಯ ಪತ್ರದ ದೃಡೀಕೃತ ಪ್ರತಿಯನ್ನ ಜಯರಾಮ್ ಗೊಲ್ಲರಹೊಸಹಳ್ಳಿ ಎನ್ನುವವರು ಪಡೆದುಕೊಂಡಿದ್ದು ಅವರು ನೀವೇ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನನ್ನ ತಂದೆ ಬದುಕಿದ್ದಾಗ ನಾನು ಯಾವುದೇ ಸ್ವತ್ತುಗಳನ್ನ ಖರೀದಿಸಿಲ್ಲ. ನನ್ನ ತಂದೆ ತೀರಿಕೊಂಡ ನಂತರ ಸ್ವತ್ತನ್ನ ಖರೀದಿಸಿದ್ದೇನೆ. ಯಾವುದೇ ಸ್ವತ್ತನ್ನ ಕ್ರಯಕ್ಕೆ ಕೊಳ್ಳುವಾಗ ಆ ಸ್ವತ್ತಿನ ಸಂನಬಂಧ ವ್ಯಾಜ್ಯಗಳು ಇವೆಯಾ ಎಂದು ಪರೀಶೀಲಿಸುತ್ತಾರೆ ಅಲ್ಲವಾ ಎಂದರೆ ಸಾಕ್ಷಿ ಅದೆನೋ ಗೊತ್ತಿಲ್ಲ ಎನ್ನುತ್ತಾರೆ. ವ್ಯಾಜ್ಯದ ಜಮೀನುಗಳನ್ನ ಯಾರು ಹಣ ಕೊಟ್ಟು ಕೊಳ್ಳುವುದಿಲ್ಲ ಎಂದರೆ ಸರಿ. ಭೈರೇಗೌಡರ ಅಣ್ಣ ತಮ್ಮಂದಿರ ನಡುವೆ ವಿಭಾಗ ಆಗಿರುವ ವಿಚಾರ ನಿಮಗೆನಾದರೂ ಗೊತ್ತಾ ಎಂದರೆ ಸಾಕ್ಷಿ ಅವರು ವಿಭಾಗ ಆಗಿ ಪ್ರತ್ಯೇಕ ಸ್ವಾದೀನದಲ್ಲಿ ಇದ್ದರು ಎನ್ನುತ್ತಾರೆ. ಭೈರೇಗೌಡರು ಹೊಳೆನರಸೀಪುರದ ಸಿವಿಲ್ ನ್ಯಾಯಾಲಯದಲ್ಲಿ ವಿಭಾಗ ಕೋರಿ ದಾವೆ ಹೂಡಿದ ವಿಚಾರ ನಿಮಗೆ ಗೊತ್ತಾ ಎಂದರೆ

ಸಾಕ್ಷಿ ಇಲ್ಲ ಎನ್ನುತ್ತಾರೆ. ಚನ್ನರಾಯಪಟ್ಟಣ ದಲ್ಲಿ ನ್ಯಾಯಾಲಯ ಪ್ರಾರಂಭವಾದ ಒ ಎಸ್ 508/89 ರ ಪ್ರಕರಣ ಚನ್ನರಾಯಪಟ್ಟಣ ದ ಸಿವಿಲ್ ನ್ಯಾಯಾಲಯಕ್ಕೆ ವರ್ಗಾವಣೆ ಆಗಿತ್ತು ಎಂದರೆ ಗೊತ್ತಿಲ್ಲ. ಆ ವಿಭಾಗದ ದಾವೆ ನ್ಯಾಯಾಲಯದಲ್ಲಿ ನಡೆದಿರುವ ವಿಚಾರ ನನಗೆ ಗೊತ್ತಿಲ್ಲ. ಆ ದಾವೆಯಲ್ಲಿ ನಿಮ್ಮ ತಂದೆ ಮತ್ತು ಭೈರೇಗೌಡನ ಅಣ್ಣ ತಮ್ಮಂದಿರು ಎಲ್ಲರೂ ಪಕ್ಷಗಾರರಾಗಿದ್ದರು ಎಂದರೆ ಸಾಕ್ಷಿ ನನಗೆ ಸರಿಯಾಗಿ ಗೊತ್ತಿಲ್ಲ ಎನ್ನುತ್ತಾರೆ. 27.07.1993 ರಲ್ಲಿ ಭೈರೇಗೌಡರಿಗೆ 1/4 ರಷ್ಟು ಭಾಗಾಂಶ ಇದೆ ಎಂದು ಆದೇಶ ಆಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆನಂತರ ಭೈರೇಗೌಡರು FDP 2/2001 ರ ಅರ್ಜಿ ದಾಖಲಿಸಿ ಅದರಲ್ಲಿ ನೀವೂ ಕೂಡ ಪಕ್ಷಗಾರರಾಗಿದ್ದಿರಿ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಆ ಅರ್ಜಿಯನ್ನ ಭೈರೇಗೌಡ ಸರಿಯಾಗಿ ನಡೆಸಿಲ್ಲ ಎಂದು ವಜಾ ಆಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಭೈರೇಗೌಡರ ಮೊಮ್ಮಗ ತನಗೆ ವಿಲ್ ಬರೆದಿದ್ದಾರೆ ಎಂದು FDP 11/2015 ಅರ್ಜಿಯನ್ನ ಸಲ್ಲಿಸಿದ್ದು ಅದು ಚಾಲ್ತಿಯಲ್ಲಿ ಇದೆ ಎಂದರೆ ಸಾಕ್ಷಿ ಗೊತ್ತು ಎನ್ನುತ್ತಾರೆ. ಅದರಲ್ಲಿ ನೀವು ತಕರಾರು ಹಾಕಿದ್ದಿರಿ ಎಂದರೆ ಸರಿ. ಆ ಅರ್ಜಿಯಲ್ಲಿ ಮರಣ ಶಾಸನವನ್ನ ವಿರೋದಿಸಿ ತಕರಾರು ಸಲ್ಲಿಸಿದ್ದು ವಿಭಾಗ ಆಗಿಲ್ಲ ಎಂದೇನೂ ಹೇಳಿಲ್ಲ ಎಂದರೆ ಸಾಕ್ಷಿ ವಿಭಾಗ ಆಗಿದೆ ಅವರವರ ಭಾಗದ ಸ್ವತ್ತುಗಳು ಅವರವರ ಅನುಭವದಲ್ಲಿ ಇವೆ ಎನ್ನುತ್ತಾರೆ. ನಿಮ್ಮ ತಂದೆ ಬದುಕಿದ್ದಾಗ ಮೇಲೆ ಹೇಳಿದ ಪ್ರಕರಣಗಳಲ್ಲಿ ವಿಭಾಗ ಈಗಾಗಲೇ ಆಗಿದೆ ಎಂದು ತಕರಾರು ಸಲ್ಲಿಸಿದ್ದರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಆನಂತರ ನೀವೇನಾದರೂ ಆ ರೀತಿ ತಕರಾರು ಸಲ್ಲಿಸಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಮೇಲೆ ಹೇಳಿದ ದಾವೆಯಲ್ಲಿ ಮನೆಯನ್ನೂ ಸೇರಿಸಿ

ಒಟ್ಟು 5 ಐಟಂ ಸ್ವತ್ತುಗಳು ಇದ್ದವು ಎಂದರೆ ಸಾಕ್ಷಿ ಕೆಲವೊಂದು ಗೊತ್ತು ಕೆಲವೊಂದು ಗೋತ್ತಿಲ್ಲ ಎನ್ನುತ್ತಾರೆ. ದಾವಾ ಸ್ವತ್ತು ಸರ್ವೆ ನಂಬರ್ಃ 8 ಆಗಿದ್ದು ಅದರ ಒಟ್ಟು ವಿಸ್ತೀರ್ಣ 6 ಎಕರೆ 26 ಗುಂಟೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಇಲ್ಲಿಯವರೆಗೂ ಆ ಸ್ವತ್ತಿನಲ್ಲಿ ಯಾವುದೇ ಪೋಡುಗಳು ಆಗಿಲ್ಲ ಎಂದರೆ ಸರಿ. ಉಳಿದ 4 ಐಟಂ ಸ್ವತ್ತುಗಳಲ್ಲೂ ಕೂಡ ಪೋಡುಗಳು ಆಗಿಲ್ಲ ಎಂದರೆ ಸರಿ. ನಿಮಗೂ ಆ ಸ್ವತ್ತುಗಳಲ್ಲಿ ಭಾಗ ಬರಬೇಕು ಎಂದು ಅಂತಿಮ ಡಿಕ್ರಿಯನ್ನ ಬರೆಸಿಕೊಂಡಿದ್ದಿರಿ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

2 ನೇ ಪ್ರತಿವಾದಿ ಸುರೇಶ ಮಂಜೇಗೌಡರ ಮಗ ಎಂದರೆ ಸರಿ. ಮಂಜೇಗೌಡರ ತಂದೆ ನಂಜೇಗೌಡ ಭೈರೇಗೌಡರ ತಮ್ಮ. ನಿಮಗೆ ನಂಜೇಗೌಡ ದೊಡ್ಡಪ್ಪ ಆಗಬೇಕು ಎಂದರೆ ಸರಿ. ಈಗ ಮೇಲೆ ಹೇಳಿರುವ ಎಲ್ಲಾ ವ್ಯಾಜ್ಯಗಳು ಇದ್ದು ಆ ವ್ಯಾಜ್ಯಗಳ ಬಗ್ಗೆ ನೀವು ತಿಳಿದುಕೊಂಡಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪುರುಷೋತ್ತಮ ಗ್ರಾಮದವರು ಆಗಿದ್ದು ನನಗೇನೂ ಆತ್ಮೀಯ ಸ್ನೇಹಿತನಲ್ಲ. ಪುರುಷೋತ್ತಮನಿಗೆ ನಿಮ್ಮ ದೊಡ್ಡಪ್ಪ ಭೈರೇಗೌಡರು ಹೂಡಿರುವ ವ್ಯಾಜ್ಯಗಳ ಬಗ್ಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಮ್ಮ ತಂದೆ ಮನೇಯ ವ್ಯವಾಹಾರ ನೋಡುತ್ತಿದ್ದಾಗ ಭೈರೇಗೌಡ ದಾವೆ ಹೂಡಿರುವ ವಿಚಾರವನ್ನ ಅವರಿಂದ ತಿಳಿದುಕೊಂಡಿದ್ದಿರಾ ಎಂದರೆಸಾಕ್ಷಿ ಇಲ್ಲ ಎನ್ನುತ್ತಾರೆ. ನನ್ನ ತಂದೆ ಜೊತೆ ನನ್ನ ಸಂಬಂಧ ಚನ್ನಾಗಿಯೇ ಇತ್ತು. ನನ್ನ ದೊಡ್ಡಪ್ಪ, ಚಿಕ್ಕಪ್ಪಂದಿರ ಜೊತೆಯು ನನ್ನ ಸಂಬಂಧ ಚೆನ್ನಾಗಿದೆ. ದಾವಾ ಸ್ವತ್ತು ಮತ್ತು ಇತರೆ ಸ್ವತ್ತುಗಳ ವಿಭಾಗ ಮಾಡಲು ಈಗಲೂ ನೀವು ಸುಖಾಸುಮ್ಮನೆ ತಕರಾರುಗಳನ್ನ ಸಲ್ಲಿಸಿ ಎಳೆದಾಡುತ್ತಿದ್ದೀರಿ ಎಂದರೆ ಸಾಕ್ಷಿ ಅವರೇ ತಕರರಾರು ಹಾಕಿದ್ದಾರೆ ಎನ್ನುತ್ತಾರೆ. ಭೈರೇಗೌಡರು

ದಾವೆ ಹೂಡಿರುವ ವಿಚಾರ FDP 11/2015 ಹೂಡಿದ ನಂತರ ನನಗೆ ಗೊತ್ತಾಗಿದೆ. ಅದಕ್ಕೂ ಮೊದಲು ನನಗೆ ಗೊತ್ತಿರಲಿಲ್ಲ. ಭೈರೇಗೌಡರ ಪರವಾಗಿ ಆಗಿರುವ ಡಿಕ್ರಿಯನ್ನ ನೀವು ಪ್ರಶ್ನಿಸಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪಿತ್ರಾರ್ಜಿತ ಆಸ್ತಿಗಳ ವಿಭಾಗ ಆಗಿರುವ ಬಗ್ಗೆ ದಾಖಲೆಯನ್ನೇನಾದರೂ ಕೊಟ್ಟಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಎಲ್ಲಾ ಆಸ್ತಿಗಳು ಇನ್ನೂ ಒಟ್ಟು ಕುಟುಂಬದಲ್ಲೇ ಇವೆ ಎಂದರೆ ಸಾಕ್ಷಿ ವಿಭಾಗ ಆಗಿವೆ ಎನ್ನುತ್ತಾರೆ. ನಮ್ಮ ಊರಿನಲ್ಲಿ ಭೈರೇಗೌಡ ಎನ್ನುವವರು ಸುಮಾರು 3-4 ಜನ ಇರಬಹುದು. ಭೈರೇಗೌಡ ಅನ್ನುವವರ ಹೆಸರನ್ನ ಇಟ್ಟುಕೊಂಡು ನಿಮ್ಮ ತಂದೆ ಜಿ ಸಿ ಬೋರೇಗೌಡರು ಪತ್ರಗಳನ್ನ ಸೃಷ್ಟಿಸುವಲ್ಲಿ ನಿಸ್ಸೀಮರಾಗಿದ್ದರು ಎಂದರೆ ಸರಿಯಲ್ಲ. ನಿಮ್ಮ ತಂದೆಯವರು ಕಾಗದ ಪತ್ರ ಬರೆಯುವ ಸಂದರ್ಬದಲ್ಲಿ ನೀವೇನಾದರೂ ಹೋಗುತ್ತಿದ್ದಿರಾ ಎಂದರೆ ಸಾಕ್ಷಿ ಪತ್ರ ಬರೆಯುವ ವಿಚಾರ ನನಗೆ ಗೊತ್ತೇ ಇಲ್ಲ ಎನ್ನುತ್ತಾರೆ. ನಿಮ್ಮ ತಂದೆ ಅನೇಕ ಪತ್ರಗಳಿಗೆ ಪತ್ರ ಬರಹಗಾರರಾಗಿದ್ದಾರೆ ಮತ್ತು ಅನೇಕ ಪತ್ರಗಳಿಗೆ ಸಾಕ್ಷಿದಾರರಾಗಿದ್ದಾರೆ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ ನಿಪಿ-1 ರ ಪತ್ರಕ್ಕೆ 1 ನೇ ಸಾಕ್ಷಿಯಾಗಿ ಸಹಿ ಮಾಡಿದ್ದಾರೆ ಅಷ್ಟೆ ಎನ್ನುತ್ತಾರೆ. ಭೈರೇಗೌಡರು ಅಮಾಯಕಾಗಿದ್ದು, ಅವರು ಇಲ್ಲದೇ ಇರುವ ಸಮಯದಲ್ಲಿ ಗೋವಿಂದೇಗೌಡನ ಹೆಸರಿಗೆ ಪತ್ರವನ್ನ ಸೃಷ್ಟಿಸಿದ್ದಾರೆ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ಅದನ್ನ ತಪ್ಪಿಸಿಕೊಳ್ಳಲು ಹಿಂದಿನ ಪ್ರಕರಣಗಳಲ್ಲಿ ತಕರಾರನ್ನ ಹಾಕದೇ ತಟಸ್ಥ ನಿಲುವು ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಮೇಲೆಹೇಳಿರುವ ಎಲ್ಲಾ ಪ್ರಕರಣಗಳು ನಿಮಗೆ ಚೆನ್ನಾಗಿಯೇ ಗೊತ್ತಿದ್ದರು ಕೂಡ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದಿರಿ ಎಂದರೆ ಸರಿಯಲ್ಲ. ಗೋವಿಂದೇಗೌಡ ಬದುಕಿದ್ದಾಗ ದಾವಾ ಸ್ವತ್ತಿನ ಖಾತಾ ಅವರ ಹೆಸರಿಗೆ ಆಗಿರಲಿಲ್ಲ

ಎಂದರೆ ಸರಿ. ಅರ್ಜಿ ಹಾಕಿದಾಗ ಪೋಡು ಮಾಡಿ ಖಾತೆ ಮಾಡಲಾಗುತ್ತದೆ ಎಂದರೆ ಸರಿ. ಗೋವಿಂದೇಗೌಡ ತನ್ನ ಹೆಸರಿಗೆ ಆಗಿರುವ ಪತರ ನೈಜ ಪತ್ರ ಆಗಿಲ್ಲದೇ ಇರುವ ಕಾರಣ ತನ್ನ ಹೆಸರಿಗೆ ಖಾತೆ ಕೋರಿ ಅರ್ಜಿ ಸಲ್ಲಿಸಿಕೊಂಡಿಲ್ಲ ಎಂದರೆ ಸಾಕ್ಷಿ ಆ ಬಗ್ಗೆ ನನಗೇನೂ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಸ್ವತ್ತನ್ನ ಹೇಗಾದರೂ ಹೊಡೆದುಕೊಳ್ಳಬೇಕು ಎನ್ನುವ ಉದ್ದೇಶದಿಂದ ನಿಮ್ಮ ತಂದೆ ಗೋವಿಂದೇಗೌಡ ರ ಹೆಸರಿಗೆ ನಾಮಕಾವಸ್ಥೆ ಕ್ರಯ ಪತ್ರವನ್ನ ಸೃಷ್ಟಿಸಿದ್ದಾರೆ ಎಂದರೇ ಸರಿಯಲ್ಲ. ವಾದಿಗಳು ಖಾತೆ ಮಾಡಲು ಕೋರಿ ಅರ್ಜಿ ಸಲ್ಲಿಸಿದಾಗ ಪ್ರತಿವಾದಿಗಳು ತಕರಾರನ್ನ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ತಹಶೀಲ್ದಾರ್ ಸ್ಥ,ಳ ಪರಿಶೀಲನೆ ಮಾಡಿ ವರದಿ ನೀಡಿರುವ ವಿಚಾರ ನನಗೆ ಗೊತ್ತಿಲ್ಲ. ಈ ವ್ಯಾಜ್ಯಕ್ಕೆ ಮೂಲ ಕಾರಣವೇ ನೀವು ಮತ್ತು ನಿಮ್ಮ ತಂದೆ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿಯೇ ಸಣ್ಣಮ್ಮ ಮತ್ತು ಇತರೆ ವಾದಿಗಳಿಗೆ ದಾಖಲೆಗಳನ್ನ ಕೊಟ್ಟು ಅವರ ಮುಖಾಂತರ ಈ ದಾವೆ ನಡೆಸುತ್ತಿದ್ದಿರಿ ಎಂದರೆ ಸರಿಯಲ್ಲ. ಸದರಿ ಆಸ್ತಿ ಚುಂಚೇಗೌಡರ ಮಗ ನಂಜೇಗೌಡನ ಕಾಲದಿಂದಲೂ ಮತ್ತು ಆನಂತರ ಪ್ರತಿವಾದಿಗಳು ದಾವಾ ಸ್ವತ್ತಿನ ಸ್ವಾದೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿ 2 ಎಕರೆ 7 ಗುಂಟೆ ಸ್ವತ್ತಿನಲ್ಲಿ ಪುರುಷೋತ್ತವರವರು ಸ್ವಾದೀನದಲ್ಲಿ ಇದ್ದಾರೆ ಎನ್ನುತ್ತಾರೆ. ಹಾಗೆ ಸ್ವಾದೀನದಲ್ಲಿ ಇದ್ದರೆ ಪ್ರತಿವಾದಿಗಳ ವಿರುದ್ಧ ಈ ದಾವೆ ಹೂಡುತ್ತಿರಲಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಈಗಲೂ ಕೂಡ ದಾವಾ ಸ್ವತ್ತು ಪ್ರತಿವಾದಿಗಳ ಸ್ವಾದೀನದಲ್ಲಿ ಇದ್ದು, ನೀವು ಸುಳ್ಳು ಸಾಧನೆ ಮಾಡುತ್ತಿದ್ದಿರಿ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

ನನ್ನಃ ಉಃಲೇಃಕ್ಕೆಃ ಬೆರಳಚ್ಚು ಮಾಡಲಾಗಿದೆ

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರದನ್ಯಾದಂ, ಚನ್ನರಾಯಪಟ್ಟಣ

OS 73/2019
PW-2

OS 73/2019
PW-2